		ಯೋಜನೆ ರೂ. ಲಕ್ಷಗಳಲ್ಲಿ	ಯೋಜನೇತರ ರೂ. ಲಕ್ಷಗಳಲ್ಲಿ
1)	ಸಹಾಯಾನುಧಾನ ರೂಪದಲ್ಲಿ	500-00	-
2)	ಪೈರು ಬೆಳೆ ನಷ್ಟ ಭರಿಸಲು ಸಹಾಯಧನ ರೂಪದಲ್ಲಿ	-	325-00
3)	ಬ್ರಿಡ್ಜ್ ಲೋನ್ ರೂಪದಲ್ಲಿ	150-00	-
	ಒಟ್ಟು	650-00	325-00

ಆ) 1. 1995-96ನೇ ಸಾಲಿನಲ್ಲಿ ಯೋಜನೆ ಸಹಾಯಾನುಧಾನವಾಗಿ ರೂ. 218.00 ಲಕ್ಷ

2. ಮಕ್ಕಳ ಕ್ಷೀರ ಭಾಗ್ಯ ಯೋಜನೆಯಡಿಯಲ್ಲಿ 677.68 ಲಕ್ಷ

ಒಟ್ಟು ರೂ. 895.68

ಹಾಲು ಒಕ್ಕೂಟಗಳ ಬಗ್ಗೆ

1913 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ರಾಜ್ಯದಲ್ಲಿ ಹಾಲು ಒಕ್ಕೂಟಗಳನ್ನು ಹಾಲು ಮತ್ತು ಹಾಲು ಉತ್ಪನ್ನಗಳನ್ನು ಮಾಡಲು ಖಾಸಗಿಯವರಿಗೆ ಕೊಡುವ ಆಲೋಚನೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದಿದೆಯೇ?

ಆ) ಖಾಸಗಿ ಕ್ಷೇತ್ರಕ್ಕೂ ಸಹಕಾರ ಕ್ಷೇತ್ರಕ್ಕೂ ಇರುವ ವ್ಯತ್ಯಾಸವೇನು?

ಶ್ರೀ ಬಿ.ಎಸ್. ಬಚ್ಚೇಗೌಡ (ಪಶುಸಂಗೋಪನಾ ಮತ್ತು ಪಶು ವೈದ್ಯ ಸಚಿವರು) :

ಆ) ಬಂದಿಲ್ಲ

ಆ) ಸಹಕಾರಿ ಕ್ಷೇತ್ರವು "ಎಲ್ಲರೂ ಒಬ್ಬರು ಮತ್ತು ಒಬ್ಬರಿಗೆ ಎಲ್ಲರೂ" ಎಂಬ ತತ್ವದ ಮೇಲೆ ಕಾರ್ಯ ನಿರ್ವಹಿಸಿ ಭಾಗವಹಿಸುವ ಎಲ್ಲಾ ಸದಸ್ಯರಿಗೂ ಸಮಾನ ಅವಕಾಶ ಸೌಲಭ್ಯ ಸವಲತ್ತುಗಳನ್ನು ನೀಡುತ್ತದೆ. ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಆದರೆ ಖಾಸಗಿ ಕ್ಷೇತ್ರವೂ ಒಬ್ಬರ ಅಥವಾ ಒಂದು ನಿಗದಿತ ಸಂಖ್ಯೆಯ ಮಾಲೀಕತ್ವಕ್ಕೆ ಸೀಮಿತವಾಗಿದ್ದಾಗಿದ್ದು ಸಾಮಾಜಿಕ ಹೊಣೆಗಾರಿಕೆ ಇಲ್ಲದೇ ಇರುವುದರ ಜೊತೆಗೆ ಕಡಿಮೆ ಭಾಗವಹಿಸುವಿಕೆ ಅಥವಾ ಸೌಲಭ್ಯ ಮತ್ತು ಸವಲತ್ತುಗಳನ್ನು ಹಂಚಿಕೊಳ್ಳುವುದು ಇರುವುದಿಲ್ಲ.

ಕುಂದಾಪುರ ತಾಲ್ಲೂಕು ಲೋಕೋಪಯೋಗಿ ರಸ್ತೆಗಳ ಕುರಿತು

2626 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಕುಂದಾಪುರ ತಾಲ್ಲೂಕಿನಲ್ಲಿ ಇರುವ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೊಳಪಟ್ಟ ರಸ್ತೆಗಳಾವುವು? (ರಸ್ತೆಯ ಉದ್ದ ಮತ್ತು ಹೆಸರು ನೀಡುವುದು)

ಆ) ಇವುಗಳಲ್ಲಿ ಡಾಂಬರೀಕರಣ ಮಾಡಿರುವ ಲೋಕೋಪಯೋಗಿ ಇಲಾಖೆ ರಸ್ತೆಗಳಾವುವು?

ಇ) ತುರ್ತು ದುರಸ್ತಿಯಾಗಬೇಕಿದ್ದ ರಸ್ತೆಗಳಾವುವು? (ರಸ್ತೆಯ ಉದ್ದ ಮತ್ತು ಹೆಸರು ಸಂಪೂರ್ಣ ವಿವರವನ್ನೊದಗಿಸುವುದು)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಕುಂದಾಪುರ ತಾಲ್ಲೂಕಿನಲ್ಲಿ 89.90 ಕಿ.ಮೀ. ಉದ್ದದ 2 ರಾಜ್ಯ ಹೆದ್ದಾರಿ ಹಾಗೂ 197.11 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳು ಇವೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) 89.80 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ಹಾಗೂ 142.84 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳಿಗೆ ಡಾಂಬರೀಕರಣವಾಗಿರುತ್ತದೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಇ) ಇತ್ತೀಚಿಗೆ ಆಗಿರುವ ಮಳೆಯಿಂದ ಹಾನಿಗೊಂಡಿರುವ ರಸ್ತೆಯ ಆಯ್ದ ಭಾಗಗಳಿಗೆ ತುರ್ತು ದುರಸ್ತಿ ಆಗಬೇಕಾಗಿದೆ. ಅದರ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಅನುಬಂಧ-1

ಕುಂದಾಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ರಸ್ತೆಗಳ ವಿವರ

ರಸ್ತೆಗಳ ಹೆಸರು	ಉದ್ದ (ಕಿ.ಮೀ.ಗಳಲ್ಲಿ)	ಡಾಂಬರೀಕರಣವಾಗಿರುವ ಉದ್ದ (ಕಿಮೀ)
1) ರಾಜ್ಯ ಹೆದ್ದಾರಿಗಳು		
1. ಆಗುಂಬೆ ಬೈಂದೂರು ರಸ್ತೆ ಕಿ.ಮೀ. 16 ರಿಂದ 88.70 ಕಿ.ಮೀ.ವರೆಗೆ	72.70	72.70
2. ಹೊನ್ನಾಳಿ ಅರಸಾಲ್ ಹಾಲ್ಕಲಿ ರಸ್ತೆ ಕಿ.ಮೀ. 131.00 ರಿಂದ 148.20ರವರೆಗೆ	17.20	17.20
	89.90	89.90
2) ಜಿಲ್ಲಾ ಮುಖ್ಯ ರಸ್ತೆಗಳು		
1. ಸೋಮೇಶ್ವರ ಕೋಟೇಶ್ವರ ರಸ್ತೆ ಕಿ.ಮೀ 27.60 ರಿಂದ 46.80ರವರೆಗೆ	19.20	19.20
2. ಹಾಲಾಡಿ ಅಮಾಸೇ ಬೈಲು ರಸ್ತೆ ಕಿಮೀ 0.0 ರಿಂದ 13.00ರವರೆಗೆ	13.00	13.00
3. ಸೌಡ ಸಿದ್ದಾಪುರ ರಸ್ತೆ ಕಿ.ಮೀ. 0.0 ಕಿ.ಮೀ. 11.90ರವರೆಗೆ	11.90	11.90
4. ಬ್ರಹ್ಮಾವರ ಜನ್ನಾಡಿ ರಸ್ತೆ ಕಿಮೀ 15.00 ರಿಂದ 19.40ರವರೆಗೆ	4.40	4.40

5.	ಕೋಟೇಶ್ವರ ಪೇಟೆ ಭಾಗದ ಹಳೇ ಎಂಬಿಸಿ ರಸ್ತೆ 1.60 ಕಿ.ಮೀ.	1.60	1.60
6.	ಗುಡ್ಡೆ ಅಂಗಡಿ ಶಿರಿಯಾದ ರಸ್ತೆ ಕಿಮೀ 0.0 ದಿಂದ 5.00 ರವರೆಗೆ	5.00	1.66
7.	ಬಿದ್ದಲಿ ಕಟ್ಟೆ ಮೋಳ ಹಳ್ಳಿ ರಸ್ತೆ ಕಿಮೀ 0.00 ದಿಂದ 6.30ರ ವರೆಗೆ	6.30	1.26
8.	ಸಿದ್ದಾಪುರ ಮಚ್ಚಟ್ಟು ರಸ್ತೆ ಕಿ.ಮೀ. 0.0 ದಿಂದ 10.00ರವರೆಗೆ	10.00	0.75
9.	ಹೊಣ್ಣೆ ಮಕ್ಕಿ ಬೇಳೂರು ಉಳ್ಳೂರು ರಸ್ತೆ ಕಿಮೀ 0.00 ದಿಂದ 13.00ರ ವರೆಗೆ	13.00	5.44
10.	ಬೆಳ್ಳೆ ಹೆಂ-ಗವಳ್ಳಿ ರಸ್ತೆ ಕಿಮೀ 0.0 ರಿಂದ 5.00 ರವರೆಗೆ	5.00	1.40
11.	ಕಂಡ್ಲೂರು ಹೊಸಂಗಡಿ ರಸ್ತೆ ಕಿಮೀ 0.0 ದಿಂದ ಕಿಮೀ 32.60ರವರೆಗೆ	32.60	32.60
12.	ಹೆಮ್ಮಾಡಿ ದೇವಲಕುಂದ ರಸ್ತೆ ಮೀ 0.00 ದಿಂದ 8.68 ರವರೆಗೆ	8.68	8.68
13.	ಒಡೇರಹೊಬಳಿ ಕೋಣಿ ಬಸ್ರೂರು ಕಂಡ್ಲೂರು ರಸ್ತೆ ಕಿ.ಮೀ 0.0 ದಿಂದ 9.65ರವರೆಗೆ	9.65	9.65
14.	ಕುಂದಾಪುರ ಪೇಟೆ ಭಾಗದ ಹಳೇ ಎಂ.ಬಿ.ಸಿ. ರಸ್ತೆ	1.80	1.80
15.	ಸಿದ್ದಾಪುರ ಹಳ್ಳಿ ಹೊಳೆ ಮುದೂರು ಜಡ್ಕಲ್ ರಸ್ತೆ 0.00 ದಿಂದ ಕಿ.ಮೀ. 43.00ರವರೆಗೆ	34.20	14.20
16.	ಗಂಗೊಳ್ಳಿಯಿಂದ ಬೈಂದೂರುವರೆಗಿನ ಹಳೇ ಎಂಬಿಸಿ ರಸ್ತೆ	13.28	13.28
17.	ಶಿರೂರು ತೊದಳ್ಳಿ ರಸ್ತೆ ಕಿ.ಮೀ. 0.00 ರಿಂದ 7.50 ರವರೆಗೆ	7.50	2.00
	ಒಟ್ಟು	197.11	142.84

ಅನುಬಂಧ-2

ದುರಸ್ತಿ ಆಗಬೇಕಾದ ರಸ್ತೆಗಳ ವಿವರ

	ಆಯ್ದ ಭಾಗಗಳು	ದುರಸ್ತಿಗೆ (ಲಕ್ಷ ರೂ.ಗಳಲ್ಲಿ)
1.	ಸಿದ್ದಾಪುರ ಹಳ್ಳಿಹೊಳೆ ಮುದ್ದೂರು ಜಡ್ಕಲ್ ರಸ್ತೆಯ ಕಿಮೀ 12.00 ರಿಂದ 14, 16, 25 ಮತ್ತು 26ರಲ್ಲಿ ಮಳೆಯಿಂದ ಹಾನಿಯಾದ ಭಾಗಗಳ ತುರ್ತು ದುರಸ್ತಿ	2.00
2.	ಹೊನ್ನಾಳಿ ಅರಸಾಳೆ ಹಾಲ್ಕಿಲ್ ರಸ್ತೆಯ ಕಿ.ಮೀ. 131 ರಿಂದ 141 ಮತ್ತು 145ರವರೆಗೆ ಆಯ್ದ ಭಾಗಗಳ ತುರ್ತು ದುರಸ್ತಿ	2.00
3.	ಶಿರೂರು ತೂದಳ್ಳಿ ರಸ್ತೆಯು ಕಿ.ಮೀ. 1,2 ಮತ್ತು 3 ರಲ್ಲಿ ಹಾನಿಗೊಂಡ ಭಾಗದ ತುರ್ತು ದುರಸ್ತಿ	0.50
4.	ಆಗುಂಬೆ ಬೈಂದೂರು ರಸ್ತೆಯ ಕಿ.ಮೀ. 16, 22, 27, 73 ಮತ್ತು 79 ಕಿಮೀಗಳಲ್ಲಿ ತುರ್ತು ದುರಸ್ತಿ	3.00
5.	ಹಳೇ ಎಂಬಿಸಿ ರಸ್ತೆ ಕಂಬದ ಕೋಣೆ ಪೇಟೆ ಭಾಗದಲ್ಲಿ ಕುಸಿದ ಮೋರಿಯ ಪುನರ್ ನಿರ್ಮಾಣ	0.50
6.	ಹೆನ್ನೂಡಿ ದೇವಲಿ ಕುಂದರಸ್ತೆಯ ಆಯ್ದ ಭಾಗಗಳಲ್ಲಿ ತುರ್ತು ದುರಸ್ತಿ	1.00
7.	ಸೋಮೇಶ್ವರ ಕೋಟೇಶ್ವರ ರಸ್ತೆಯ ಆಯ್ದ ಭಾಗಗಳಲ್ಲಿ ಮಳೆಯಿಂದ ಹಾನಿಗೊಂಡ ಭಾಗಗಳ ತುರ್ತು ದುರಸ್ತಿ	1.00
8.	ಹಾಲಾಡಿ ಅಮಾಸೇ ಬೈಲು ರಸ್ತೆಯಲ್ಲಿ ಹಾನಿಗೊಂಡ ಭಾಗಗಳಲ್ಲಿ ತುರ್ತು ದುರಸ್ತಿ.	1.00
9.	ಹುಣ್ಣಿ ಮಕ್ಕಿ ಬೇಳೂರು ರಸ್ತೆಯ ಕಿಮೀ 10.40, 10.50 ಮತ್ತು 12.10ರಲ್ಲಿ ಹಾನಿಗೊಂಡ ಭಾಗಗಳ ತುರ್ತು ದುರಸ್ತಿ	1.00
10.*	ಬ್ರಹ್ಮಾವರ ಜನ್ನಾಡಿ ರಸ್ತೆಯ ಹಾನಿಗೊಂಡಿರುವ ಭಾಗದ ತುರ್ತು ದುರಸ್ತಿ	0.50
11.	ವಡೇರಹೊಬಳಿ ಕೋಣೆ ಬಸ್ರೂರು ರಸ್ತೆಯಲ್ಲಿ ಹಾನಿಗೊಂಡ ಭಾಗಗಳ ತುರ್ತು ದುರಸ್ತಿ	0.50

12.	ಕಂಡ್ಲೂರು ಹೊಸಂಗದ ರಸ್ತೆಯಲ್ಲಿ ಹಾನಿಗೊಂಡ ಭಾಗಗಳ ದುರಸ್ತಿ	1.00
13.	ಗುಡ್ಡೆ ಅಂಗಡಿ ಶಿರಿಯೂರ ರಸ್ತೆಯ ಕಿ.ಮೀ. 3.15ರಿಂದ 3.28ರ ಭಾಗದ ತುರ್ತು ದುರಸ್ತಿ.	0.35
		14.35

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮ ಕಟ್ಟಡಗಳು

2628 - ಶ್ರೀ ಕೆ. ಪ್ರತಾಪ್ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಯಾವ ಯಾವ ಗ್ರಾಮ ಪಂಚಾಯಿತಿಗಳು ಸಾರ್ವಜನಿಕರ ಹಿತದೃಷ್ಟಿಯಿಂದ ನಿರ್ಣಯಿಸಿದ, ತೆರವು, ಮಾಡಲು ಲೋಕೋಪಯೋಗಿ ಇಲಾಖೆಗೆ ಕೇಳಿಕೊಂಡ ಅಕ್ರಮ ಕಟ್ಟಡಗಳು ಹಾಗೂ ತಾತ್ಕಾಲಿಕ ಶೆಡ್ಡುಗಳ ಸಂಖ್ಯೆ ಎಷ್ಟು;

ಆ) ಲೋಕೋಪಯೋಗಿ ಇಲಾಖೆ ತೆಗೆದುಕೊಂಡ ಕ್ರಮವೇನು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಐದು ಗ್ರಾಮ ಪಂಚಾಯತಿಗಳು ನಿರ್ಣಯಿಸಿದ ಅಕ್ರಮ ಕಟ್ಟಡಗಳು ಹಾಗೂ ತಾತ್ಕಾಲಿಕ ಶೆಡ್ಡುಗಳನ್ನು ತೆರವು ಮಾಡಲು ಲೋಕೋಪಯೋಗಿರವರಿಗೆ ಕೋರಿರುತ್ತಾರೆ. ಅವುಗಳು:

(1) ಪಡುವರಾರು ಗ್ರಾಮ ಪಂಚಾಯತ್

(2) ಮುನ್ನೂರು ಗ್ರಾಮ ಪಂಚಾಯತ್

(3) ಉಪ್ಪಿನಂಗಡಿ ಗ್ರಾಮ ಪಂಚಾಯತ್

(4) ಹಾಲಾಡಿ ಗ್ರಾಮ ಪಂಚಾಯತ್

(5) ಪೆರುವಾಜೆ ಗ್ರಾಮ ಪಂಚಾಯತ್

ಅಕ್ರಮ ಕಟ್ಟಡಗಳು ಹಾಗೂ ತಾತ್ಕಾಲಿಕ ಶೆಡ್ಡುಗಳು ಐದು (5) ಇರುತ್ತದೆ.

ಆ) ಸಂಬಂಧಪಟ್ಟವರಿಗೆ ನೋಟೀಸ್ ಜಾರಿ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಪಂಚಾಯತ್ ತೂಫಾನ್ ಕಾರ್ಯಕ್ರಮ

2255 - ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 'ಪಂಚಾಯತ್ ತುಫಾನ್' ಕಾರ್ಯಕ್ರಮ ರಾಜ್ಯದ ಯಾವ ಯಾವ ತಾಲ್ಲೂಕುಗಳಿಗೆ ಹಮ್ಮಿಕೊಳ್ಳಲಾಗಿದೆ?

ಆ) ಈ ಹಿಂದೆ ಹಾಕಿಕೊಂಡ ಕಾರ್ಯಕ್ರಮವೇನು? ಮುಂದೆ ಹಾಕಿಕೊಳ್ಳುವ ಕಾರ್ಯಕ್ರಮವೇನು?